## ಪ್ರಧಾನ ಸಿವಿಲ್ ಜೆಡ್ಜ್ ವತ್ತು ಜೆಎಮ್‌ಎಫ್ ಸಿ ನ್ಯಾಯಾಲಯ, ಕೆ. ಆರ್. ನಗರ

**ಸಿಸಿ - 504/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಡಾಃ ಕಿಶೋರ್ ಎಂ ಆರ್ | ಸಿಡಬ್ಲ್ಯೂ 24 |
| ತಂದೆಯ ಹೆಸರು | - | ಲೇಟ್ ಎಂ ಜಿ ರಾಜು | ಪಿಡಬ್ಲ್ಯೂ 16 |
| ವಯಸ್ಸು | - | 47 ವರ್ಷ | |
| ಕೆಲಸ | - | ವೈದ್ಯಾಧಿಕಾರಿ | ಸಾ.ಪ್ರ.ಬೋ |
| ವಾಸ | - | ಕೆ ಆರ್ ನಗರ | ದಿ. 31.05.2019 |

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

1) ದಿನಾಂಕಃ 22-06-2012 ರಿಂದ ಕೆ ಆರ್ ನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯನಾಗಿ ಕಾರ್ಯ ನಿರ್ವಹಿಸುತ್ತಿರುತ್ತೇನೆ. ದಿನಾಂಕಃ 29-09-2014 ರಂದು ಬೆಳಿಗ್ಗೆ 10.45 ಗಂಟೆ ಸಮಯದಲ್ಲಿ ನಿಂಗಮ್ಮ, 80 ವರ್ಷ ರವರು ದಿನಾಂಕಃ 26-09-2014 ರಂದು ಸಂಜೆ 8.00 ಗಂಟೆಯಲ್ಲಿ ರಾಂಪುರದಲ್ಲಿ ಹಲ್ಲೆಗೊಳಗಾಗಿರುತ್ತಾರೆ ಎಂದು ಚಿಕಿತ್ಸೆಗೆ ಬಂದಿರುತ್ತಾರೆ. ಗಾಯಾಳು ದಿನಾಂಕಃ 27-09-2014 ರಂದು ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಸಾಲಿಗ್ರಾಮ ಆಸ್ಪತ್ರೆಯ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಕೆ ಆರ್ ನಗರ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಗಾಯಾಳುವನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳಾಗಿರುತ್ತವೆ.

(1) ಎಡತೊಡೆಯಲ್ಲಿ ನೋವು ಕಂಡಿರುತ್ತದೆ. ಇವರನ್ನು ಮೂಳೆ ವೈದರು ಪರೀಕ್ಷಿಸಿ ಎಡತೊಡೆಯಲ್ಲಿರುವ ಪೀಮರ್ ಎಲುಬು ಮುರಿದಿರುತ್ತದೆ ಎಂದು ತಿಳಿಸಿರುತ್ತಾರೆ.

ದಿನಾಂಕಃ 01-10-2014 ರಂದು ಸದರಿ ಗಾಯಾಳು ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ.

ಪಾಟೀ ಸವಾಲು ಆರೋಪಿ ಪರ ಹೆಚ್ ಕೆ ಸಿ ವಕೀಲರಿಂದ -

2) ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರದವರು ಬರವಣಿಗೆಯಲ್ಲಿ ನಮಗೆ ಮೃತ ನಿಂಗಮ್ಮ ನನ್ನು ಕಳುಹಿಸಿರುತ್ತಾರೆ. ನಿಂಗಮ್ಮನ ಜೊತೆ ನಾರಾಯಣಗೌಡ ಎಂಬುವವರು ಬಂದಿದ್ದರು. ಹಲ್ಲೆಯಾಯಿತು ಎಂದು ಹೇಳಿಕೆ ನಾರಾಯಣಗೌಡ ನನ್ನ ಮುಂದೆ ನೀಡಿರುತ್ತಾರೆ

ಎಂದರೆ ನಿಜ. ಗಾಯಾಳುವಿಗೆ ತುರ್ತಾಗಿ ಶಸ್ತ್ರ ಚಿಕಿತ್ಸೆ ಅವಶ್ಯಕತೆ ಇರುವುದರಿಂದ ಕೆ ಆರ್ ಆಸ್ಪತ್ರೆಗೆ ನಾನು ರೆಪರ್ ಮಾಡಿರುತ್ತೇನೆ ಎಂದರೆ ನಿಜ. ಸಾಕ್ಷಿಯು ಆ ದಿನ ಕೆ ಆರ್ ನಗರ ಸರ್ಕಾರಿ ಆಸ್ಪತ್ರೆಯಲ್ಲಿ ಮೂಳೆ ತಜ್ಞರು ಇಲ್ಲದೆ ಇರುವುದರಿಂದ ಮೈಸೂರು ಕೆ ಆರ್ ಆಸ್ಪತ್ರೆಗೆ ರೆಪರ್ ಮಾಡಿರುತ್ತೇನೆ. ವೈದ್ಯರು ನೀಡಿದ ಹೊರರೋಗಿಗಳ ಚೀಟಿಯನ್ನು ಸಾಕ್ಷಿ ನೋಡಿ ಗುರ್ತಿಸಿದ್ದು, ಸದರಿ ಚೀಟಿಯನ್ನು ನಿಪಿ 13 ಎಂದು ಗುರ್ತಿಸಲಾಯಿತು, ಸಾಕ್ಷಿ ಸಹಿಯನ್ನು ನಿಪಿ13 ಎ ಎಂದು ಗುರ್ತಿಸಲಾಯಿತು. ನಾನು ಮೈಸೂರಿಗೆ ಗಾಯಾಳುವನ್ನು ಕರೆದುಕೊಂಡು ಹೋಗಿ ಎಂದು ಹೇಳಿದರು ಗಾಯಾಳು ಕಡೆಯವರು ಅವರನ್ನು ಮೈಸೂರಿಗೆ ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ನಿಜ.

ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ